## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಹೆಚ್.ಎಂ.ದ್ಯಾಮಪ್ಪ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬೆಂಗಳೂರು ದಕ್ಷಿಣ ಮತ್ತು ಶ್ರೀ ಕೃಷ್ಣಪ್ಪ ಲೋಹರ್, ಹಿಂದಿನ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಇವರುಗಳ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸುವ ಬಗ್ಗೆ.

ಓದಲಾಗಿದೆ:-
1. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 174 ವಿಸೇಬಿ 2014 ದಿ: 29-09-2014.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:174:ವಿಸೇಬಿ:2014 ದಿ:15.10.14.
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ:174:ವಿಸೇಬಿ:2014 ದಿ:16.01.15.
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:174:ವಿಸೇಬಿ:2014.ದಿ:04.02.2016.
5. ಶ್ರೀ ಹೆಚ್.ಎಂ.ದ್ಯಾಮಪ್ಪ ಇವರ ಮನವಿ ದಿ:19-03-2016
6. ಶ್ರೀ ಕೃಷ್ಣಪ್ಪ ಲೋಹರ್ ಇವರ ಮನವಿ ದಿ:24-03-2016.

------

ಪ್ರಸ್ತಾವನೆ:-

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸಿ, ಆಡಳಿತಾತ್ಮಕ ಮಂಜೂರಾತಿ, ತಾಂತ್ರಿಕ ಮಂಜೂರಾತಿ, ಟೆಂಡರ್ ಪ್ರಕ್ರಿಯೆಯ ವಿವರಗಳು ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಿಲ್ಲುಗಳ ಪಾವತಿ ವಿವರಗಳನ್ನು ಗಣಕೀಕರಣಗೊಳಿಸಲು ಸೂಚಿಸಲಾಗಿರುತ್ತದೆ. ಹಾಗೂ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಬಳಕೆಯನ್ನು ದಿ:02.04.2013 ರಿಂದ ಕಡ್ಡಾಯಗೊಳಿಸಿದೆ. ಮತ್ತು ದಿನಾಂಕ:03.10.2013 ರಿಂದ ತಂತ್ರಾಂಶದ ಹೊರಗಡೆ ಬಿಲ್ಲು ಪಾವತಿಸುವುದನ್ನು ನಿಷೇಧಿಸಲಾಗಿದೆ. ಆದಾಗ್ಯೂ ಈ ಯೋಜನೆಯನ್ನು ಕೆಲವೊಂದು ಜಿಲ್ಲೆಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಅನುಷ್ಠಾನಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದ ಹಿನ್ನಲೆಯಲ್ಲಿ ಸದರಿ ತಂತ್ರಾಂಶವನ್ನು ಅನುಷ್ಠಾನಗೊಳಿಸದೆ ಕರ್ತವ್ಯ ಲೋಪವೆಸಗಿದ ಅಧಿಕಾರಿಗಳಿಗೆ ದಿನಾಂಕ: 19.05.2014ರ ಕಾರಣ ಕೇಳುವ ನೋಟೀಸು ಜಾರಿಗೊಳಿಸಿ ಈ ಬಗ್ಗೆ 3 ದಿನಗಳ ಒಳಗಾಗಿ ಸಮಜಾಯಿಷಿ ನೀಡಲು ಸೂಚಿಸಿದ್ದು, ಆದರೆ ಸದರಿ ಅಧಿಕಾರಿಗಳು 4 ತಿಂಗಳ ಅವಧಿ ಗತಿಸಿದರೂ ಸಹ ಉತ್ತರವನ್ನು ಸಲ್ಲಿಸದೆ ಕರ್ತವ್ಯ ನಿರ್ಲಕ್ಷತೆ ಎಸಗಿದ ಶ್ರೀ ಹೆಚ್.ಎಂ.ದ್ಯಾಮಪ್ಪ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬೆಂಗಳೂರು ದಕ್ಷಿಣ ಮತ್ತು ಶ್ರೀ ಕೃಷ್ಣಪ್ಪ ಲೋಹರ್, ಹಿಂದಿನ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಇವರುಗಳ ಸೇರಿದಂತೆ ಇತರೇ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 12(1)(ಎ)ರಡಿಯಲ್ಲಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ:29.09.2014 ರಂದು ಕಾರಣ ಕೇಳುವ ನೋಟಿಸೊಂದಿಗೆ ದೋಷಾರೋಪಣೆ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ-(2)ರಲ್ಲಿ ಓದಲಾದ ದಿನಾಂಕ:15.10.2014ರ ಆದೇಶದಲ್ಲಿ ಶ್ರೀ ಹೆಚ್.ಎಂ.ದ್ಯಾಮಪ್ಪ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬೆಂಗಳೂರು ದಕ್ಷಿಣ ಮತ್ತು ಶ್ರೀ ಕೃಷ್ಣಪ್ಪ ಲೋಹರ್, ಹಿಂದಿನ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಇವರು ಸೇರಿದಂತೆ ಇತರೆ ಅಧಿಕಾರಿಗಳನ್ನು ದಿನಾಂಕ: 15.10.2014ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಪಡಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ-(3)ರಲ್ಲಿ ಓದಲಾದ ದಿನಾಂಕ:16-01-2016ರ ಆದೇಶದಲ್ಲಿ ಶ್ರೀ ಹೆಚ್.ಎಂ.ದ್ಯಾಮಪ್ಪ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬೆಂಗಳೂರು ದಕ್ಷಿಣ

ಮತ್ತು ಶ್ರೀ ಕೃಷ್ಣಪ್ಪ ಲೋಹರ್, ಹಿಂದಿನ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಇವರುಗಳ ಅಮಾನತ್ತು ತೆರವುಗೊಳಿಸಿ ಸೇವೆಗೆ ಪುನರ್ ಸ್ಥಾಪಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ-(4)ರಲ್ಲಿ ಓದಲಾದ ದಿನಾಂಕ:04-02-2016ರ ಆದೇಶದಲ್ಲಿ ಶ್ರೀ ಹೆಚ್.ಎಂ.ದ್ಯಾಮಪ್ಪ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬೆಂಗಳೂರು ದಕ್ಷಿಣ ಮತ್ತು ಶ್ರೀ ಕೃಷ್ಣಪ್ಪ ಲೋಹರ್, ಹಿಂದಿನ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಇವರುಗಳ ವಿರುದ್ಧ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ದೋಷಮುಕ್ತಗೊಳಿಸಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ-(5)ರಲ್ಲಿ ಓದಲಾದ ಶ್ರೀ ಹೆಚ್.ಎಂ.ದ್ಯಾಮಪ್ಪ ಇವರು ದಿ:19.03.2016ರ ಪತ್ರದಲ್ಲಿ ಮತ್ತು ಶ್ರೀ ಕೃಷ್ಣಪ್ಪ ಲೋಹರ್ ಇವರು ದಿ:24.03.2016ರ ಪತ್ರದಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ, ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಅಳವಡಿಕೆಯಲ್ಲಿನ ಕರ್ತವ್ಯಲೋಪದ ಬಗ್ಗೆ ತಮ್ಮ ಸಮಜಾಯಿಷಿಯನ್ನು ಸರ್ಕಾರವು ಅಂಗೀಕರಿಸಿ, ಜಾರಿ ಮಾಡಿರುವ ಆರೋಪಗಳಿಂದ ದೋಷಮುಕ್ತಗೊಳಿಸಲಾಗಿದೆ. ಅದ್ದರಿಂದ ದಿನಾಂಕ: 15.10.2014 ರಿಂದ ದಿನಾಂಕ: 16.01.2015ರವರೆಗೆ ಕಳೆದ ಅಮಾನತ್ತು ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಲು ಕೋರಿರುತ್ತಾರೆ. ಸರ್ಕಾರವು ಸದರಿಯವರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಶ್ರೀ ಹೆಚ್.ಎಂ.ದ್ಯಾಮಪ್ಪ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬೆಂಗಳೂರು ದಕ್ಷಿಣ ಮತ್ತು ಶ್ರೀ ಕೃಷ್ಣಪ್ಪ ಲೋಹರ್, ಹಿಂದಿನ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಇವರುಗಳ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 12(1)(ಎ)ರಡಿಯಲ್ಲಿ ದಿನಾಂಕ:29.09.2014ರಂದು ಜಾರಿ ಮಾಡಿರುವ ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣೆ ಪಟ್ಟಿಗೆ ಸಂಬಂಧಿಸಿದಂತೆ ದೋಷಮುಕ್ತಗೋಳಿಸಿ, ಆದೇಶಿಸಿರುವುದರಿಂದ ಸದರಿಯವರುಗಳು ದಿನಾಂಕ: 15.10.2014 ರಿಂದ ದಿನಾಂಕ: 16.01.2015ರ ವರಗೆ ಕಳೆದ ಅಮಾನತ್ತು ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು 100(3)ರ ಅನ್ವಯ ಕರ್ತವ್ಯದ ಅವಧಿಯೆಂದು ಪರಿಗಣಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ **41** ವಿಸೇಬಿ **2016**. ಬೆಂಗಳೂರು ದಿನಾಂಕ: **04.06.2016**</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಶ್ರೀ ಹೆಚ್.ಎಂ.ದ್ಯಾಮಪ್ಪ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ,ಬೆಂಗಳೂರು ದಕ್ಷಿಣ ಮತ್ತು ಶ್ರೀ ಕೃಷ್ಣಪ್ಪ ಲೋಹರ್, ಹಿಂದಿನ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ,ಬೆಂಗಳೂರು ನಗರ ಇವರುಗಳು ಅಮಾನತ್ತಿನಲ್ಲಿ ಕಳೆದ ದಿನಾಂಕ: 15.10.2014 ರಿಂಧ ದಿನಾಂಕ: 16.01.2015ರ ವರೆಗಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು 100(3)ರನ್ವಯ ಕರ್ತವ್ಯದ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್ ರಂಗನಗೌಡ), 4/6/2016
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ.

3. ಶ್ರೀ ಹೆಚ್.ಎಂ.ದ್ಯಾಮಪ್ಪ ಕಾರ್ಯನಿರ್ವಾಹಕ ಅಧಿಕಾರಿ,ತಾಲ್ಲೂಕು ಪಂಚಾಯತಿ ಬೆಂಹಳೂರು ದಕ್ಷಿಣ ತಾಲ್ಲೂಕು.
4. ಶ್ರೀ ಕೃಷ್ಣಪ್ಪ ಲೋಹರ್, ಪಂಚಾಯತ್ ಸೌಲಭ್ಯ ತಜ್ಞರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಬಹುಮಹಡಿ ಕಟ್ಟಡ,ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) /ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
6. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
7. ಮಾಹಿತಿ ಕೇಂದ್ರ / ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ.